ಸೂಪರ್ ಜನಮನ

ಕಣಕ

ಸೋಮವಾರ ಜೂನ್ 23, 2014

super.janamana@gmail.com



ಕಾಲಿಗೊಂದು ಮೊಬೈಲ್ ಜಾಮರ್

ವಾಹನ ಚಾಲಿಸುವಾಗ ಮೊಬೈಲು ಬಳಸಬಾರದೆನ್ನುವ ನಿಯಮವನ್ನು ಗಾಳಿಗೆ ತೂರುವವರನ್ನು ಅವರಿಗೆ ಗೊತ್ತಿಲ್ಲದಂತೆಯೇ ತಡೆಯುವ ಸಾಧನವನ್ನು ತಮಿಳುನಾಡಿನ ಇಂಜಿನಿಯರುಗಳು ರೂಪಿಸಿದ್ದಾರೆ.

ಅಪಾಯ ತಡೆಯುವ ಸಾಧನ

ರಿಂಗ್ ರೋಡ್ ಸಮೀಪದಲ್ಲಿ ವಾಕಿಂಗ್ ಹೋಗಿದ್ದ ವ್ಯಕ್ತಿ ಮೊಬೈಲಿನಲ್ಲಿ ಮಾತುಕತೆಯಲ್ಲಿ ಮುಳುಗಿ ರೈಲಿಗೆ ಸಿಕ್ಕು ಮರಣಿಸಿದ ಸಂಗತಿ ಮೈಸೂರಿನಲ್ಲಿ ಘಟಿಸಿತ್ತು. ಲಲಿತಮಹಲ್ ಬಳಿ ಮೋಟಾರ್ ಬೈಕ್ ಸವಾರನೊಬ್ಬ ಇದೇ ರೀತಿ ಮೊಬೈಲು ಬಳಸುತ್ತ ವಾಹನ ಚಲಿಸಿದ್ದು ಅವನ ಪ್ರಾಣಕ್ಕೇ ಕುತ್ತಾಗಿತ್ತು. ವಾಹನವನ್ನು ಚಲಾಯಿಸುವಾಗ ಚಾಲಕರು ಮೊಬೈಲು ಬಳಸುವುದು ಅವರಿಗಷ್ಟೇ ಅಲ್ಲ, ರಸ್ತೆಯಲ್ಲಿ ಸಂಚರಿಸುವ ಇತರರಿಗೂ ಅಪಾಯ ತಂದೊಡ್ಡಬಹುದು.

ವಾಹನ ಸಂಚಾರ ಇರುವೆಡೆ ನಡೆಯುವಾಗ, ವಾಹನ ಚಾಲಿಸುವಾಗ ಮೊಬೈಲು ಬಳಸಬಾರದೆನ್ನುವ ನಿಯಮ ಇದೆ. ಆದರೂ ಇಂತಹ ಅವಘಡಗಳ ಬಗ್ಗೆ ಆಗಾಗ್ಗೆ ಕೇಳುತ್ತಲೇ ಇರುತ್ತೇವೆ. ಇಂತಹ ಅಪಾಯಗಳನ್ನು ತಡೆಯುವ ಹೊಸ ಸಾಧನವೊಂದರ ಬಗ್ಗೆ ಸುದ್ದಿ ಬಂದಿದೆ. ತಮಿಳುನಾಡಿನ ಸೇಲಂನಲ್ಲಿರುವ ಎ.ವಿ.ಎಸ್. ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಅಬ್ದುಲ್ ಶಬೀರ್ ಮತ್ತು ಅವರ ಸಂಗಡಿಗ ಅಬ್ದುಲ್ ಜಬಾರ್ ಚಾಲಕರು ವಾಹನ ಚಲಿಸುತ್ತ ಮೊಬೈಲಿನಲ್ಲಿ ಮಾತನಾಡಲು ಎಳಸದಂತೆ ಮಾಡುವ ಇಲೆಕ್ಟ್ರಾನಿಕ್ ಸಾಧನವೊಂದನ್ನು ರೂಪಿಸಿರುವ ಸುದ್ದಿ ಜರ್ನಲ್ ಆಫ್ ಸೈಂಟಿಫಿಕ್ ಅಂಡ್ ಇಂಡಸ್ಟ್ರಿಯಲ್ ರೀಸರ್ಚ್‌ನ ಜೂನ್ ಸಂಚಿಕೆಯಲ್ಲಿ ಪ್ರಕಟವಾಗಿದೆ.

ಛೇ. ಮೊಬೈಲಿನಲ್ಲಿ ಮಾತನಾಡುವುದಕ್ಕೂ, ವಾಹನ ಅಪಘಾತಗಳಿಗೂ ಏನು ಸಂಬಂಧ ಎನ್ನುವವರಿಗೆ ಇದೋ ಕೆಲವು ಅಂಕಿ–ಸಂಖ್ಯೆಗಳು. ಚಾಲಕರ ಗಮನವನ್ನು ರಸ್ತೆಯಿಂದ ದೂರ ಸೆಳೆದು, ಅಕಸ್ಮಾತ್ತಾಗಿ ಘಟಿಸುವ ಸಂಗತಿಗಳಿಗೆ ಪ್ರತಿಕ್ರಿಯೆ ನಿಧಾನವಾಗುವುದೇ ಪ್ರತಿ ವರ್ಷ ನಡೆಯುವ 14 ಲಕ್ಷ ವಾಹನಗಳ ಅಪಘಾತಗಳಿಗೆ ಕಾರಣವಂತೆ. ಇದರಲ್ಲಿ ಕಾಲು ಭಾಗ ಮೊಬೈಲು ಫೋನು ಸಂಭಾಷಣೆಗಳಿಂದಾಗಿ ಆಗುತ್ತವಂತೆ. ಮೊಬೈಲಿನಲ್ಲಿ ಮಾತನಾಡುತ್ತ ವಾಹನವನ್ನು ಚಲಿಸುವವರು ಹೆಚ್ಚಾಗಿ ಮುಂದಿರುವ ವಾಹನಗಳಿಗೆ ತಾವೇ ಗುದ್ದಿಸುವ ಘಟನೆಗಳೇ ಹೆಚ್ಚು ಎಂದು ಇನ್ನೊಂದು ವರದಿ ಹೇಳುತ್ತದೆ. ಇಂತಹ ಚಾಲಕರು ಇದ್ದಕ್ಕಿದ್ದ ಹಾಗೆ ಬ್ರೇಕ್ ಹಾಕಬೇಕಾದಾಗ ಬೇರೆ ಚಾಲಕರಿಗಿಂತಲೂ ನಿಧಾನ. ಅಂದರೆ ಬ್ರೇಕ್ ಹಾಕಲು ಎಂಬತ್ತು ಸೆಕೆಂಡು ಬೇಕಾದ ಕಡೆ ಇವರಿಗೆ ನೂರು ಸೆಕೆಂಡು ತಗುಲುತ್ತದೆ. ಹಾಗೆಯೇ ಬ್ರೇಕ್ ಹಾಕಿದ ವಾಹನವನ್ನು ಮರಳಿ ಮೊದಲಿನ ಗತಿಗೇ ತರುವುದರಲ್ಲೂ ಇವರು ನಿಧಾನ. ಎಲ್ಲರಿಗೂ 85 ಸೆಕೆಂಡು ಸಾಕಾದರೆ, ಮೊಬೈಲಿನಲ್ಲಿ ಮಾತನಾಡುತ್ತಿರುವ ಚಾಲಕರಿಗೆ ನೂರು ಸೆಕೆಂಡು ಬೇಕಾಗುತ್ತದೆ. ಜೊತೆಗೆ ಈ ಅಪಾಯ ನೀವು ಯಾವ ವಾಹನವನ್ನು ಚಾಲಿಸುತ್ತಿದ್ದೀರಿ ಎನ್ನುವುದನ್ನೂ ಅವಲಂಬಿಸಿದೆ. ಮೊಬೈಲ್ ಫೋನ್ ಅನ್ನು ಡಯಲ್ ಮಾಡಿದರೆ ಆಗುವ ಅಪಾಯ ಕಾರು, ಆಟೋದಂತಹ ಲಘು ವಾಹನ ಚಾಲಿಸುವಾಗಿನದ್ದಕ್ಕಿಂತ, ಟ್ರಕ್ಕು ಬಸ್ಸಿನಂತಹ ಭಾರೀ ವಾಹನಗಳನ್ನು ಚಾಲಿಸುವಾಗ ದುಪ್ಪಟ್ಟು ಇರುತ್ತದೆಂದು ಅಮೆರಿಕೆಯ ವರ್ಜಿನಿಯಾ ಸಂಚಾರಿ ತಂತ್ರಜ್ಞಾನ ಸಂಸ್ಥೆಯ ಅಧ್ಯಯನಗಳು ತಿಳಿಸುತ್ತವೆ.


ಮೊಬೈಲು ಬಳಸುತ್ತಲೇ ವಾಹನ ಚಾಲಿಸುವುದರಲ್ಲಿ ಇಷ್ಟೊಂದು ಅಪಾಯಗಳಿದ್ದರೂ ಅದನ್ನು ನಿರ್ಲಕ್ಷಿಸುವವರ ಸಂಖ್ಯೆಯೇ ಜಾಸ್ತಿ. ಅಬ್ದುಲ್ ಶಬೀರ್ ಇದಕ್ಕಾಗಿ 900 ಚಾಲಕರನ್ನು ಪ್ರಶ್ನಿಸಿದ್ದಾರೆ. ಅವರಲ್ಲಿ ಶೇಕಡ 91 ಮಂದಿ ಒಮ್ಮೆಯಲ್ಲ ಒಮ್ಮೆ ವಾಹನ ಚಾಲಿಸುತ್ತಲೇ ಮೊಬೈಲಿನಲ್ಲಿ ಮಾತನಾಡಿದ್ದಾಗಿ ಒಪ್ಪಿಕೊಂಡಿದ್ದಾರೆ. ಹಾಗಂತ ಇವರೆಲ್ಲ ವಾಹನ ಚಲಾಯಿಸುವಾಗ ಮೊಬೈಲು ಫೋನು ಬಳಸುವುದನ್ನು ನಿಷೇಧಿಸುವುದನ್ನು ಒಪ್ಪುವುದಿಲ್ಲ. ಅಪ್ಪಿ, ತಪ್ಪಿ ಎಲ್ಲಿಯಾದರು ತುರ್ತು ಕರೆ ಬಂದರೆ ಎಂದೇ ಬಹುತೇಕ ಮಂದಿ ವಾಹನ ಚಲಾಯಿಸುವಾಗ ಕರೆ ಬಂದಲ್ಲಿ ಉತ್ತರಿಸುತ್ತೇವೆ ಎಂದು ಶಬೀರ್ ಅವರಿಗೆ ಒಪ್ಪಿಸಿದ್ದಾರೆ.

ಅಂದ ಮೇಲೆ ನೀವು ಎಷ್ಟೇ ದಂಡ ಹಾಕಿ, ಪಾಠ ಹೇಳಿ ವಾಹನ ಚಲಾಯಿಸುತ್ತಲೇ ಮೊಬೈಲು ಬಳಸುವವರನ್ನು ತಡೆಯುವುದು ಅಸಾಧ್ಯ. ಇದಕ್ಕೆ ಶಬೀರ್ ಇನ್ನೊಂದು ಉಪಾಯ ಹುಡುಕಿದ್ದಾರೆ. ಚಾಲಕರು ಮೊಬೈಲು ಬಳಸಲು ಆರಂಭಿಸಿದ ಕೂಡಲೇ ಅದನ್ನು ನಿಷ್ಕ್ರಿಯಗೊಳಿಸುವ ಜಾಮರ್ ಅನ್ನು ಬಳಸುವುದು. ಆದರೆ ಇಲ್ಲೊಂದು ಸಮಸ್ಯೆ ಇದೆ. ಚಾಲಕರ ಮೊಬೈಲನ್ನಷ್ಟೆ ಜಾಮ್ ಮಾಡುವುದು ಹೇಗೆ? ಅದೇ ವಾಹನದಲ್ಲಿ ಇತರೆ ಸವಾರಿಗಳೂ ಇರುತ್ತಾರಲ್ಲ. ಅವರ ಮೊಬೈಲೂ ಜಾಮ್ ಆಗದಂತೆ ನೋಡಿಕೊಳ್ಳುವುದು ಹೇಗೆ?

ಚಾಲಕರು ಮೊಬೈಲುಗಳನ್ನು ಬಳಸುವುದನ್ನು ತಡೆಯಲು ಹಲವು ಸಾಧನಗಳಿವೆ. "ಐಜುಪ್, ಡ್ರೈವರ್ ಅಸಿಸ್ಟ್, ಕೀ2ಸೇಫ್‌ಡ್ರೈವಿಂಗ್, ಸೆಲ್ ಕಂಟ್ರೋಲ್, ಜೂಮ್ ಸೇಫರ್, ಸೆಲ್ ಸೇಫ್ಟಿ ಮುಂತಾದ ಹಲವು ಸಾಧನಗಳು, ಆಪ್‌ಗಳಿವೆ. ಆದರೆ ಇವು ಯಾವುವೂ ವಾಹನದೊಳಗೆ ಬಳಕೆಯಾಗುತ್ತಿರುವ ಮೊಬೈಲು ಚಾಲಕನದ್ದೋ, ಸವಾರಿಯದ್ದೋ ಎಂಬ ವ್ಯತ್ಯಾಸವನ್ನು ತಿಳಿಯಲಾರವು" ಎನ್ನುತ್ತಾರೆ ಶಬೀರ್. ಜೊತೆಗೆ ವಾಹನ ಚಾಲನೆಗೆ ತೊಡಗುವ ಮೊದಲು ಚಾಲಕ ಈ ಸಾಧನವನ್ನು ಚಾಲಿಸಬೇಕಾಗುತ್ತದೆ. ಆತ ಇದನ್ನು ಮರೆಯುವ ಸಾಧ್ಯತೆಯೇ ಹೆಚ್ಚು.


ಶಬೀರ್ ಅವರ ಸಾಧನ ಚಾಲಕನ ಮೊಬೈಲನ್ನು ಸವಾರಿಗಳ ಮೊಬೈಲಿನಿಂದ ಪ್ರತ್ಯೇಕಿಸಿ ಅಡ್ಡಗಟ್ಟುತ್ತದೆ. ಇದಕ್ಕೆ ಇವರು ಮೊಬೈಲಿನಿಂದ ಹರಿದಾಡುವ ರೇಡಿಯೊ ಅಲೆಗಳನ್ನು ಗುರುತಿಸುವ ಸೂಕ್ಷ್ಮ ಇಲೆಕ್ಟ್ರಾನಿಕ್ ಆಂಟೆನಾವನ್ನು ನಿರ್ಮಿಸಿದ್ದಾರೆ. ಇದರ ವಿಶೇಷವೇನೆಂದರೆ, ಇದು 75 ಮಿಲಿವೋಲ್ಟ್‌ಗಿಂತ ಹೆಚ್ಚು ವಿದ್ಯುತ್ ಉಂಟು ಮಾಡುವ ಸಂಕೇತಗಳನ್ನು ಅಡ್ಡಗಟ್ಟುತ್ತದೆ. ಅದಕ್ಕಿಂತ ಕಡಿಮೆ ಸಾಮರ್ಥ್ಯದ ಸಂಕೇತಗಳನ್ನು ಅಡ್ಡಗಟ್ಟುವುದಿಲ್ಲ.

> 2



ಎರ ತೆಪ್ಪ ಕಟ್ತೈತೆ!

ಹೈಕ್ಳ ಪಾಠ



ಕೆಂಜಗ ಕಂಡ್ರೆ ಮೈಯೆಲ್ಲ ಕೆರಕಾಬೇಕನ್ಸತ್ತಲ್ಲವ್ರ! ಅದ್ರ ಕಡ್ತ ಯಾವಂಗೆ ತಡ್ಯಾಕಾಗ್ತದೆ ಅಲ್ಲವ್ರ. ಅಂದ್ರೂ ನೋಡ್ರಪ್ಪ. ಅದು ಏನ್ಮಾಡ್ತದೆ ನೋಡೇ ಬಿಡಾಣ ಅನ್ನೋರೂ ಅದಾರೆ. ಇಗಾ ಮನ್ಮನ್ನೆ ಕ್ಯಾಳ್ಪಟ್ಟ ವಿಸ್ಯ ಏಳ್ತೀನಿ. ಡೇವಿಡ್ ಹೂ ಅನ್ನವಾ ಕೆಂಜಗಗಳನ್ನ ಇಡ್ದು, ದೊಡ್ಡಾಸ್ಪತ್ರೇಲಿ ಮಾಡಾ ಅಂಗೆ ಸೀಟಿಸ್ಕಾನು ಮಾಡವನಂತೆ. ಆ ಪುಟ್ಟ ಜೀವಾನ ಇಡ್ದು ಇಂಗ್ಮಾಡಾಕೆ ಅವಂಗೇನು ದೊಡ್ರೋಗ ಬಂದೋ ಅನ್ಬ್ಯಾಡಿ. ಹುಚ್ಚು ಹೊಳೆ, ಬಿರ್ಗಾಳಿ ಬಂದಾಗ ಈ ಇರುವೆಗಳು ಅದೆಂಗೆ ಇರಾ ಜಾಗದಾಗೇ ಉಳ್ಕಳ್ತಾವೆ ಅಂತ ನೋಡಾಕೆ ಇಂಗೆ ಮಾಡವ್ನಂತೆ.

ಔದಪ್ಪ. ಎರಾ ಯಾವತ್ತೂ ಒಬ್ಬಂಟಿಯಾಗಿ ಓಡಾಡಕಿಲ್ಲ. ಓದ್ರೆ ಗುಂಪ್ನಾಗೇ ಗೋವಿಂದ ಅಂದ್ಕಂಡೇ ಓಡಾಡಾದನ್ನ ಕಂಡೀವಿ. ಒಸಿ ಬೆಲ್ಲ ಎಲ್ಲಾದ್ರೂ ಮಡ್ಗಿದ್ರೆ ತಕ್ಷಣ ಸಾವ್ರಾರು ಬಂದು ಮುತ್ಕೊಂತವೆ. ಇವೇನು ಸುಮ್ಸುಮ್ನೆ ಗುಡ್ಡೆ ಬೀಳ್ತಾವೋ, ಇಲ್ಲ ಗೋಕಲಾಸ್ಟಮಿ ದಿನ ಮಡಕೆ ಒಡೆಯಾಕೆ ಪಡ್ಡೆ ಐಕ್ಳು ಗೋಪ್ರ ಕಟ್ತಾವಲ್ಲ, ಅಂಗೆ ಗೋಪ್ರ ಕಟ್ಕಂಡದಾವೋ ಅಂತ ಈವಪ್ಪಂಗೆ ಅನ್ಮಾನ. ಅದ್ಕೆ, ಇಂತ ಇರವೇನಲ್ಲ ಉಡ್ಕೊಂಡು ಓಗಿ, ಸೀಟಿಸ್ಕಾನು ಮಾಡವ್ನೆ.

ಒಂದು ಇರ್ವೆ ಕಚ್ಚುದ್ರೇನೇ ಉರಿ ತಡ್ಯಕೆ ಆಗಲ್ಲ. ಇನ್ನು ಗೂಡೊಳ್ಗಿನ ಇರವೆ ಎಲ್ಲ ಬಂದ್ರೆ ಎಂಗಿದ್ದಾತು ಯೋಳಿ. ಒಂದೊಂದು ಗೂಡ್ನಾಗು ನೂರಾರು ಅಲ್ಲ, ಸಾವ್ರಾರು ಇರ್ವೆಗೋಳು ಇರತಾವಂತೆ. ಇವೂ ಒಮ್ಮೊಮ್ಮೆ ಇರೋ ಗೂಡು ಬಿಟ್ಟು ಬ್ಯಾರೆ ತಾವು ಉಡ್ಕೊಂಡು ಓಗ್ತಾವೆ. ಅಂಗೆ ಗುಳೆ ಓಗುವಾಗೆಲ್ಲ ನಮ್ಮೂರ ಸ್ಕೂಲ ಮಕ್ಕಳ ಅಂಗೆ ಸಿಸ್ತಾಗಿ, ಸಾಲಾಗಿ ಓಗ್ತವೆ. ಅಪಾಯ ಬಂದ್ರೆ ಮಾತ್ರ ಸಾಲು ಬಿಟ್ಟು ಗುಡ್ಡೆ ಬೀಳ್ತವೆ. ಇಂಗೆ ಗುಡ್ಡೆ ಯಾಕೆ ಬೀಳ್ತವೆ? ಅದ್ರಿಂದ ಏನು ಉಪಯೋಗ ಅಂತ ಹೂ ಮತ್ತೆ ಅವ್ನ ಜೊತೆಗಾರ್ರು ತಿಳ್ಕಬ್ಯಾಕಂತೆ.

ಪಡ್ಡೆ ಐಕ್ಳು ಗೋಪ್ರ ಕಟ್ತೋವಾಗ, ಒಬ್ನ ಕೈಗೆ ಇನ್ನೊಬ್ಬ ತಗಲ್ಕೊಂಡು ನಿಂತ್ಕಂತಾರೆ. ಈ ಎರಗಳು ಗುಡ್ಡೆ ಬೀಳ್ವಾಗ ಏನ್ಮಾಡ್ತಾವಂತೆ ಗೊತ್ತಾ.

ಎರಗೋಳ್ಗೆ ಕೈ ಇಲ್ಲ. ಇರೋದೆಲ್ಲ ಆರ್ಕಾಲು. ಒಂದ್ರ ಕಾಲನ್ನ ಇನ್ನೊಂದು ಇಟ್ಕೊಂಡ್ತಾವಾ ನೋಡೋಮ ಅಂದ್ರೆ ಆ ಗುಂಪ್ನೊಳಗೆ ಯೇನೂ ಕಾಣಂಗೆ ಇರೋಲ್ಲ. ಅದುಕ್ಕೆ ಈವಪ್ಪ ಸೀಟಿಸ್ಕಾನು ಉಪಯೋಗಸವ್ನೆ.

ಕಡ್ಡಿ ಮ್ಯಾಲೆ ಏರೋ ಇರುವೆ, ನೀರ ಮ್ಯಾಲೆ ತೇಲೋ ಇರ್ವೆಗಳನೆಲ್ಲ ಪೋಟೋ ತೆಗ್ದು ನೋಡವ್ನೆ. ಯಪ್ಪೋ, ಯಪ್ಪೋ. ಅಲ್ಲೇನ್ಕಂಡ ಅಂತೀರಿ. ಒಂದೊಂದು ಇರವೇನೂ ಒಂದಲ್ಲ, ಎರ್ಡಲ್ಲ, ಆರು ಕೈಗೆ ಆರೂ ಅಲ್ಲ, ಹದನಾಲ್ಕು ಬ್ಯಾರೆ ಇರವೆಗಳ್ನ ತಗಲಾಕ್ಕೊಂಡು ಜೋತಾಡ್ತವಂತೆ. ಬರೇ ಕೈ ಇಟ್ಕಂಡು ತಳ್ಳಾಡೋಲ್ಲ. ನೀರೊಳ್ಗೆ ಇದ್ರೆ ಕಾಲಲ್ಲೇ ಪಕ್ಕದಾಗಿರೋ ಇರವೇನ ಇಡ್ಕಂಡು ಒಸಿ ದೂರದಾಗೇ ಮಡ್ಕಂತವಂತೆ. ಇಂಗೆ ನೂರಾರು ಇರವೆಗಳು ಜೊತೆ ಸೇರ್ದಾಗ, ದೊಡ್ಡ ತೈಪ್ಪ ಆದಂಗೆ ಆಗ್ತದೆ. ಈ ತೈಪ್ಪ ಸರಾಗವಾಗಿ ನೀರ ಮ್ಯಾಗೆ ತೇಲ್ಕಂಡು ಓಗ್ಬಹುದಂತೆ.

ಅದ್ಸರಿ, ಒಸಿ ನೀರು ಜೋರಾಗಿ ಓಡುದ್ರೆ ಇವೆಲ್ಲ ಕಿತ್ಕೋಗಬ್ಯೆದು ಅಂದ್ಕಂಡೆ. ಅಂಗಾಗಾಕಿಲ್ಲಂತೆ. ಯಾಕಂದ್ರೆ ಇವು ಒಂದಕ್ಕೊಂದು ಸರದಾಗೆ ಮಣಿ ಪೋಣ್ಸಿದಂತೆ ಜೋಡಿಸ್ಕಳಲ್ಲವಂತೆ. ಒಂದು ಅಡ್ಡಕ್ಕೆ ಇದ್ರೆ, ಇನ್ನೊಂದು ಉದ್ದಕ್ಕೆ ತಗಲ್ಕಂಡಿರುತ್ತೆ. ಗೂಡಲ್ಲಿ ಇರೋ ದೊಡ್ಡ ಇರವೆಗಳು ಆರು ಕಾಲ್ಗಳ ಜೊತೀಗೆ, ಮೀಸೆ, ಕಾಲ್ಮೇಲೆ ಇರೋ ರೋಮ, ಇಂಗೆ ಸಿಕ್ಕ ಸಿಕ್ಕದ್ದನ್ನೆಲ್ಲ ಭದ್ರವಾಗಿ ಇಡ್ಕೊಂಡು ಇರ್ತವಂತೆ. ಒಂದೊಂದ್ಸಲ ಈ ದೊಡ್ಡ ಇರವೆ ಇನ್ನೂ ಇಪ್ಪತ್ತೊಂದು ಇರವೆಗಳ್ನ ಇಡ್ಕಂಡಿರತದೆ. ಅಂದ್ರೆ ಸೊಳ್ಳೆ ಬಲೇ ತರ ಇಂಗೆ ದೊಡ್ಡ ಬಲೇನೇ ಆಗೋಯ್ತಲ್ಲವ್ರ. ಈ ಬಲೆ ಅರಿಯೋದೂ ಕಸ್ಟ. ಯಾಕಂದ್ರೆ ಇಂಗೆ ಇರವೆಗಳು ಒಂದಿನ್ನೊಂದ್ರ ಜತೆ ನೈತಾಕ್ಕೊಂಡಾಗ, ಒಂದೊಂದು ಇರವೇಗೂ ನಾಕಿರವೆ ಅಲ್ಲ ನಾನೂರು ಇರವೆ ಬಲ ಬರ್ತದಂತೆ.

ಏನೋಪ್ಪ. ಒಳ್ಗಿರೋ ತೂತ್ನೊಳಗೆ ನೀರು ತುಂಬ್ಕಂಡ್ರೆ, ತೈಪ್ಪ ತೇಲೋದುಂಟ? ಅನ್ಮಾನ ಬ್ಯಾಡಿ. ಈ ತೂತೊಳ್ಗೆ ಚಿಕ್ಕ ಪುಟ್ಟ ಇರವೆಗಳು ಬಂದು ಕೂತ್ಕಂಡು ತೂತು ಮುಚ್ಚತವೆ. ಇಂಗೆ ಈ ಇರವೆ ತೈಪ್ಪ ಮುಳ್ಗೋ ಅಸ್ಟು ಬಾರಾನೂ ಅಲ್ಲ, ನೀರು ತುಂಬ್ಕೊಳೋ ಅಸ್ಟು ತೂತಿರೋದು ಅಲ್ಲ. ಅದ್ಕೆ ಗೂಡ್ಗೆ ನೀರು ತುಂಬ್ಕೊಂಡಾಗ ಗೂಡಲ್ಲಿರೋ ಎಲ್ಲ ಇರವೇಗಳೂ ಒಂದೇ ಸರೀಕೆ ಬ್ಯಾರೆ ಕಡೀಕೆ ಓಗ್ಬಿಡಬೈದು ಅಂತಾರೆ ಹೂ.


ಔದಲ್ಲವ್ರ. ನೆರೆ ಬಂದಾಗ ನೆರೆಮನೆಯೋವರನೆಲ್ಲ ಬುಟ್ಬುಟ್ಟು ದೋಣಿ ಅತ್ತೋ ನಮಗೆ ಇದು ವಿಚಿತ್ರ ಅನ್ಸತದೆ.

— ಹಳ್ಳಿ ಮೇಷ್ಟ್ರು



ಜ್ಞಾನ ಚೂರ್ಣ

ಪ್ರಾಣಿಜಗತ್ತಿನ ಕೀರಲು ರಾಜ



ದಕ್ಷಿಣ ಅಮೆರಿಕದ ಈ ಜೀರುಂಡೆ ಪ್ರಾಣಿಜಗತ್ತಿನಲ್ಲಿ ಅತ್ಯಂತ ಉಚ್ಚ ಸ್ಥಾಯಿಯ ಹಾಡು ಹಾಡುತ್ತದಂತೆ. ದಕ್ಷಿಣ ಅಮೆರಿಕದ ಕೊಲಂಬಿಯಾ ಹಾಗೂ ಈಕ್ವಡಾರ್‌ನ ದಟ್ಟ ಕಾಡುಗಳಲ್ಲಿ ವಾಸಿಸುವ ಈ ಜೀರುಂಡೆಯ ಗಂಡುಗಳು ತಮ್ಮ ಕಾಲನ್ನು ಉಜ್ಜಿ ಶಬ್ದ ಮಾಡುತ್ತವೆ. ನಮ್ಮೂರು ಜೀರುಂಡೆಗಳು 5ರಿಂದ 30 ಕಿಲೋ ಹರ್ಟ್ಸ್ ತರಂಗಾಂತರದ ಸದ್ದನ್ನು ಸೃಷಿಸುತ್ತವೆ. ಆದರೆ ಸೂಪರ್‌ಸೋನಸ್ ಎಂದು ಹೆಸರಿಸಿರುವ ಈ ಜೀರುಂಡೆ 150 ಕಿಲೋ ಹರ್ಟ್ಸ್ ತರಂಗಾಂತರದ ಸದ್ದು ಮಾಡುತ್ತದಂತೆ. ಇಷ್ಟು ಕೀರಲು ಶಬ್ದವನ್ನು ನಮ್ಮ ಕಿವಿ ಗ್ರಹಿಸುವುದಿಲ್ಲ ಅನ್ನುವುದು ಅದೃಷ್ಟ ಅನ್ನೋಣವೇ!

ಪ್ರೇಯಸಿ ಅರಸಿ ಹಳ್ಳಕ್ಕೆ ಬೀಳು

ನಗರೀಕರಣದ ಸಮಸ್ಯೆಗಳು ಕಪ್ಪೆಗಳನ್ನೂ ಬಿಟ್ಟಿಲ್ಲ! ತೈವಾನಿನ ಈ ಮರಗಪ್ಪೆ (ಕುರಿಕ್ಸಾಲಸ್ ಡಯೋಟೋಕಸ್) ಮಳೆಗಾಲದಲ್ಲಿ ಹೆಣ್ಣನ್ನು ಹುಡುಕಿ ವಟರುಗುಟ್ಟುತ್ತದೆ. ಪಾಪ. ಕಾಂಕ್ರೀಟು ಕಾಡುಗಳಲ್ಲಿ ವಾಹನಗಳ ಸದ್ದಿನ ನಡುವೆ ಇದರ ಪ್ರೇಮಗೀತೆ ಎಲ್ಲಿ ಕೇಳಬೇಕು? ಅದಕ್ಕೆ ಇತ್ತೀಚೆಗೆ ಗಂಡುಗಪ್ಪೆಗಳು ಇನ್ನೊಂದು ಉಪಾಯ ಹುಡುಕಿವೆಯಂತೆ. ಅವು ಮನದನ್ನೆಯ ನೆನಪಾದಾಗಲೆಲ್ಲ ಚರಂಡಿಗೋ, ಮೋರಿಗೋ ಇಳಿದು ಅಲ್ಲಿ ವಟಗುಟ್ಟಲು ಆರಂಭಿಸುತ್ತವೆ. ಇದು ಅದಕ್ಕೇ ಮೊದಲಿಗಿಂತಲೂ ಹೆಚ್ಚೆಚ್ಚು ಮರಗಪ್ಪೆಗಳು ತೈವಾನಿನ ಬಚ್ಚಲು, ಚರಂಡಿಗಳಲ್ಲಿ ಸಿಗುತ್ತಿವೆ. ಬಚ್ಚಲುಗಳಲ್ಲಿ ಇರುವ ಕಪ್ಪೆಗಳೆಲ್ಲವೂ ಗಂಡುಗಪ್ಪೆಗಳಾದ್ದರಿಂದ ಈ ಊಹೆ ಮಾಡಿದ್ದಾರೆ ತೈವಾನ್ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಕಿರ್ಕ್ ಲಿನ್.

